# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಅಕ್ಟೋಬರ್ 2021**, ಬೆಂಗಳೂರು, ಸಂಪುಟ 7, ಸಂಚಿಕೆ 6 ಪುಟ-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 Ocober. 2021**, Bengaluru, Vol. 7, Issue. 6, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.

**ಧಮ್ಮ ಪದಗಳು**

ಸಬ್ಬೇ ಧಮ್ಮಾ ಅನತ್ತಾ'ತಿ,
ಯದಾ ಪನ್ಞಾಯ ಪಸ್ಸತಿ ;
ಅಥ ನಿಬ್ಬಿಂದತಿ ದುಕ್ಖೇ,
ಏಸ ಮಗ್ಗೋ ವಿಸುದ್ಧಿಯಾ.

ಎಲ್ಲಾ ವಿದ್ಯಮಾನಗಳೂ ಹುರುಳಿಲ್ಲದವುಗಳು. ಯಾವಾಗ ವ್ಯಕ್ತಿಯು ಒಳನೋಟದಿಂದ ಇದನ್ನು ಗಮನಿಸುತ್ತಾನೋ ಆಗ ಅವನು ದುಃಖದಿಂದ ಬಿಡುಗಡೆಯಾಗುತ್ತಾನೆ. ಇದೇ ಪರಿಶುದ್ಧತೆಗೆ ದಾರಿ.

**ಧಮ್ಮಪದ–279, ಮಹಾವಗ್ಗೋ**

## ಮಾರನ ಹಿಡಿತದಿಂದ ಬಿಡುಗಡೆಯ ಪರಿಪೂರ್ಣ ಸ್ಥಿತಿ

**ಆಚಾರ್ಯ ಎಸ್.ಎನ್. ಗೋಯಂಕ, ರಂಗೂನ್ 13.6.1968**

**(ಈ ಪತ್ರವನ್ನು ಗೋಯಂಕಾಜಿಯವರು ಭಾರತದಲ್ಲಿನ ತಮ್ಮ ತಮ್ಮಂದಿರು ಮತ್ತವರ ಹೆಂಡತಿಯರಿಗೆ ಬರೆದಿದ್ದರು. ಅವರೆಲ್ಲರೂ ಸಯಾಜಿ ಉ ಬಾ ಖಿನ್‌ರವರ ವಿಪಶ್ಯನ ವಿದ್ಯಾರ್ಥಿಗಳಾಗಿದ್ದರು. ಬುದ್ಧರ ಮಹಾಸಮಯ ಪ್ರವಚನವನ್ನಾಧರಿಸಿದ ಈ ಪತ್ರವು ವ್ಯಕ್ತಿಯ ಮನಸ್ಸನ್ನು ಆಕ್ರಮಿಸಿಕೊಳ್ಳುವ ಮಲಿನತೆಗಳಿಂದ ರಕ್ಷಿಸಿಕೊಳ್ಳುವುದರ ಅವಶ್ಯಕತೆಯನ್ನು ವಿವರಿಸುತ್ತದೆ. ಅಕ್ಟೋಬರ್ 2014ರ ಇಂಗ್ಲಿಷ್ ವಿಪಶ್ಯನ ವಾರ್ತಾ ಪತ್ರದಿಂದ ಅನುವಾದಿಸಲಾಗಿದೆ.)**

**ಪ್ರೀತಿಯ ಶಂಕರ್, ಸೀತ, ರಾಧೆ, ವಿಮಲ, ನೀವು ಧರ್ಮದಲ್ಲಿ ಸ್ಥಿರವಾಗಿ !**

ಇಂದು ಭಗವಾನ್ ಬುದ್ಧರು ಮಹಾಸಮಯ ಪ್ರವಚನವನ್ನು ನೀಡಿದ ದಿನ. ಈ ಪ್ರವಚನವನ್ನು ನೀಡಲು ಇದ್ದ ಮೂಲ ಕಾರಣವೆಂದರೆ ಶಾಖ್ಯರಿಗೂ ಮತ್ತು ಅವರ ಮಾತೃ ಸಂಬಂಧದ ಕೋಲಿಯರಿಗೂ ಇದ್ದ ನಿರಂತರವಾದ ಕಲಹ. ರೋಹಿಣಿ ನದಿಯ ಒಂದು ದಡದ ಮೇಲೆ ಶಾಖ್ಯರು ಮತ್ತೊಂದು ದಡದ ಮೇಲೆ ಕೋಲಿಯರು ವಾಸಿಸುತ್ತಿದ್ದರು. ಎರಡೂ ಜನಾಂಗದವರ ಕೃಷಿ ಭೂಮಿಗಳಿಗೆ ನೀರುಣಿಸುತ್ತಿದ್ದ ನದಿ ನೀರಿಗಾಗಿ ಅವರು ಜಗಳವಾಡುತ್ತಿದ್ದರು. ಬೇಸಿಗೆಯಲ್ಲಿ ನದಿ ನೀರಿನ ಮಟ್ಟ ಕುಸಿದು ಭೂಮಿಯು ಒಣಗಿದಾಗ, ಅವರ ಪರಸ್ಪರ ದ್ವೇಷ ತೀವ್ರಗೊಳ್ಳುತ್ತಿತ್ತು. ಒಂದು ಬೇಸಿಗೆಯ ಮಧ್ಯಾಹ್ನ ಈ ಜಗಳವು ತಾರಕಕ್ಕೇರಿ ಎರಡೂ ರಾಜ್ಯಗಳ ಮಧ್ಯೆ ಯುದ್ಧ ನಡೆಯುವ ಮಟ್ಟಕ್ಕೆ ಹೋಯಿತು.

ನದಿ ನೀರಿನ ಜಗಳದಲ್ಲಿ ತನ್ನ ರಕ್ತಸಂಬಂಧಿಗಳು ಒಬ್ಬರನ್ನೊಬ್ಬರು ಹತ್ಯೆಗೈಯಲು ಸಿದ್ಧರಾಗಿರುವುದನ್ನು ಬುದ್ಧರು ತಮ್ಮ ದಿವ್ಯದೃಷ್ಟಿಯಿಂದ ಅರಿತರು. ತಕ್ಷಣ ಅವರು ಯುದ್ಧಭೂಮಿಯನ್ನು ತಲುಪಿ ಅವರನ್ನು ಶಾಂತಗೊಳಿಸಿದರು. ನದಿ ನೀರಿಗಿಂತ ಮಾನವ ಜನ್ಮ ಹೇಗೆ ಬಹಳ ಅಮೂಲ್ಯವಾದುದು ಮತ್ತು ರಕ್ತ ಹರಿಸುವುದು ಹೇಗೆ ಅತಿದೊಡ್ಡ ನಷ್ಟ ಎಂಬುದನ್ನು ವಿವರಿಸಿದರು. ಅವರು ಒಂದು ಧರ್ಮ ಪ್ರವಚನ ನೀಡಿದರು.

ಇದರಿಂದ ಉತ್ತೇಜನಗೊಂಡು ಶಾಕ್ಯ ಮತ್ತು ಕೊಲಿಯ ರಾಜರ ಸೇವೆಯಲ್ಲಿದ್ದ 500 ಜನ ಯೋಧರು ತಮ್ಮ ಗೃಹಸ್ಥ ಜೀವನವನ್ನು ತ್ಯಾಗ ಮಾಡಿ ಸಂನ್ಯಾಸಿಗಳಾಗಿ ಭಿಕ್ಷು ಸಂಘ ಸೇರಿದರು. ಬುದ್ಧರಿಂದ ವಿಪಶ್ಯನ ಧ್ಯಾನವನ್ನು ಕಲಿತು, ಪರಿಶ್ರಮದಿಂದ ಸಾಧನೆ ಮಾಡಿ ಅರಹಂತರಾದರು. ಈ 500 ಜನ ಅರಹಂತ ಭಿಕ್ಖುಗಳ ಜೊತೆಗೂಡಿ ಬುದ್ಧರು ಈಗಿನ ನೇಪಾಳದಲ್ಲಿರುವ ಕಪಿಲವತ್ಥು(ಕಪಿಲವಸ್ತು) ನಗರದ ಹತ್ತಿರವಿರುವ ಹಿಮಾಲಯದ ಮಹಾವನ ಕಾಡಿಗೆ ತೆರಳಿದರು.

ಅಲ್ಲಿ ಬುದ್ಧ ಹೇಳಿದರು : "ಯುವಕನಾಗಿರುವವನು, ಬ್ರಹ್ಮಚರ್ಯೆಯಲ್ಲಿ ಸ್ಥಾಪಿತಗೊಂಡರೆ ಸಂನ್ಯಾಸಿಯಾಗುತ್ತಾನೆ ಮತ್ತು ಒಬ್ಬ ಅರಹಂತನು ಪಡೆಯುವ ಮುಕ್ತಿಯ ಅತ್ಯುತ್ತಮ ಫಲಗಳನ್ನು ಪಡೆಯುತ್ತಾನೆ. ಅಂತಹ ವ್ಯಕ್ತಿಯು, ಮನಸ್ಸಿನ ಎಲ್ಲಾ ಮಲಿನತೆಗಳಿಂದ ಮುಕ್ತನಾಗಿ, ಮೋಡವಿಲ್ಲದ ರಾತ್ರಿಯಲ್ಲಿ ಪೂರ್ಣಚಂದ್ರನು ಬೆಳಗುವಂತೆ ಬೆಳಗುತ್ತಾನೆ".

500 ಜನ ಭಿಕ್ಖುಗಳೊಡನೆ ಬುದ್ಧರು ಬೀಡುಬಿಟ್ಟಿರುವ ಸಮಾಚಾರವು ದೇವಲೋಕಗಳಿಗೆ ತಲುಪಿತು. ಹತ್ತು ದೇವಲೋಕಗಳ ದೇವತೆಗಳು ಬುದ್ಧರಿಗೆ ಮತ್ತು ಆಂತರಿಕ ಪರಿಶುದ್ಧತೆಯಿಂದ ಹೊಳೆಯುತ್ತಿದ್ದ ಯುವ ಭಿಕ್ಖುಗಳಿಗೆ ಗೌರವ ಸೂಚಿಸಲು ಮಹಾವನ ಕಾಡಿನಲ್ಲಿ ಸೇರಿದರು. ಭೂಮಿ ಮತ್ತು ಆಕಾಶದಲ್ಲಿ ನೆಲೆಸಿದ್ದ ದೇವತೆಗಳು ಮತ್ತು ಅನೇಕ ವಿಶ್ವವ್ಯವಸ್ಥೆಗಳ ಬ್ರಹ್ಮರುಗಳು ಸಂತೋಷದಿಂದ ಹೀಗೆ ಹೇಳಿದರು :

**ತತ್ರ ಭಿಕ್ಖವೊ ಸಮಾದಹಂಸು, ಚಿತ್ತಮತ್ತನೊ ಉಜುಕಂ ಆಕಂಸು; ಸಾರಥೀವ ನೆತ್ತಾನಿ ಗಹೇತ್ವಾ, ಇಂದ್ರಿಯಾನಿ ರಕ್ಖಂತಿ ಪಂಡಿತಾ (ಡಿ.ಎನ್.2.7.33, ಮಹಾಸಮಯ ಸುತ್ತ).**

–ಒಬ್ಬ ನಿಪುಣ ಮತ್ತು ಸಮರ್ಥ ಸಾರಥಿಯು ತನ್ನ ಕುದುರೆಗಳನ್ನು ಶಿಸ್ತಿಗೊಳಪಡಿಸಿ ನಿಯಂತ್ರಣದಲ್ಲಿರಿಸಿಕೊಳ್ಳುವಂತೆ, ಈ ಭಿಕ್ಖುಗಳು ತಮ್ಮ ಇಂದ್ರಿಯಗಳನ್ನು ನಿಗ್ರಹಿಸಿದ್ದಾರೆ, ತಮ್ಮ ಮನಸ್ಸುಗಳನ್ನು ಬಲಗೊಳಿಸಿ ಏಕಾಗ್ರಗೊಳಿಸಿದ್ದಾರೆ ಮತ್ತು ಅವರು ಧ್ಯಾನದಲ್ಲಿ ಲೀನವಾಗಿದ್ದಾರೆ.

ವಿವಿಧ ರೀತಿಯ ಭವ್ಯತೆ, ಕಾಂತಿಯಿಂದ ಕೂಡಿದ್ದ ಈ ಸಂತೋಷಭರಿತ ದೇವತೆಗಳು ರತ್ನಾಲಂಕೃತ ಒಡವೆ ವಸ್ತ್ರಗಳನ್ನು ಧರಿಸಿದ್ದರು. ಇವರ ಉಪಸ್ಥಿತಿಯನ್ನು ಬುದ್ಧರು ಭಿಕ್ಖುಗಳಿಗೆ ತಿಳಿಸಿದರು, ಮತ್ತು ಈ ದೇವತೆಗಳು ವಿವಿಧ ಭೂಭಾಗಗಳಿಂದ, ಗಿರಿ ಕಂದರಗಳಿಂದ, ವಿವಿಧ ದೇವಲೋಕಗಳಿಂದ ಬಂದಿದ್ದಾರೆ ಎಂದು ತಿಳಿಸಿದರು. ಇವರನ್ನು ನೋಡಲು ಭಿಕ್ಖುಗಳನ್ನು ಶಕ್ತರನ್ನಾಗಿಸಲು ಅವರಿಗೆ ದಿವ್ಯದೃಷ್ಟಿಯ (ದಿಬ್ಬ–ಚಕ್ಕು) ಅಭ್ಯಾಸವನ್ನು ಬೋಧಿಸಿದರು. ಕೆಲವು ಭಿಕ್ಖುಗಳು ಒಂದು ನೂರು ದೇವತೆಗಳನ್ನು, ಕೆಲವರು ಒಂದು ಸಾವಿರ ದೇವತೆಗಳನ್ನು, ಕೆಲವರು ಒಂದು ಲಕ್ಷ ದೇವತೆಗಳನ್ನು ನೋಡಿದರು. ಕೆಲವರು ಎಲ್ಲಾ (ಹತ್ತು) ದಿಕ್ಕುಗಳಲ್ಲೂ ಲೆಕ್ಕವಿಲ್ಲದಷ್ಟು ದೇವತೆಗಳನ್ನು ಕಂಡರು(ಮಹಾಸಮಯ ಸುತ್ತ, 2.7.334.).

ಈ ರೀತಿಯಾಗಿ ಭಿಕ್ಖುಗಳು ಅನೇಕ ದೇವಲೋಕಗಳ ಜೀವಿಗಳನ್ನು ನೋಡಿದರು. ನಂತರ ಬುದ್ಧರು ಅಲ್ಲಿ ನೆರೆದಿದ್ದ ಕೆಲವು ದೇವತೆಗಳ ಹೆಸರುಗಳನ್ನು ಹೇಳಿದರು. ಅವರು ದೇವತೆಗಳ ಉಜ್ವಲ ಕಾಂತಿಯ ಬಗ್ಗೆ ಈ ರೀತಿ ಹೇಳಿದರು.

**ಇದ್ಧಿಮಂತೋ ಜುತಿಮಂತೋ, ವಣ್ಣವಂತೋ ಯಸಸ್ಸಿನೋ ; ಮೋದಮಾನಾ ಅಭಿಕ್ಕಾಮುವ್ ಸಮಿತಿಮ್ ವಣಂ.(ಮಹಾಸಮಯ ಸುತ್ತ 2.7.340)**

–ಬೆಳಗುವ, ಅತ್ಯಂತ ಔದಾರ್ಯದ ಮತ್ತು ಸಮೃದ್ಧ ಕ್ರಿಯೆಗಳ ಮಹಿಮಾನ್ವಿತ ದೇವತೆಗಳು ಇಂದು ಈ ಕಾಡಿನಲ್ಲಿ ಭಿಕ್ಖುಗಳಿಗೆ ಗೌರವ ಸೂಚಿಸಲು ಇಲ್ಲಿ ಉಪಸ್ಥಿತರಿದ್ದಾರೆ. ಇಂದ್ರ (ದೇವತೆಗಳ ರಾಜ) ಮತ್ತು ಬ್ರಹ್ಮರುಗಳನ್ನೊಳಗೊಂಡ ಈ ಅದ್ಭುತ ಕೂಟದ ಜೊತೆಗೆ ದುಷ್ಟ ಮಾರನು ಸಹ ತನ್ನ ಮಲಿನತೆಗಳ ಸೈನ್ಯದೊಂದಿಗೆ ಬಂದಿದ್ದಾನೆ ಎಂದೂ ಹೇಳಿದರು. ಬಂದಾಗ ಮಾರನು ಈ ರೀತಿಯಾಗಿ ಕೂಗಿದನು :

**ಈಥ ಗಣಹಥ ಬಂಧಥ, ರಾಗೇನ ಬಾಧಮತ್ಥು ವೊ ;**
**ಸಮಂತಾ ಪರಿವಾರೇಥಾ,ಮಾ ವೊ ಮುನ್ಚಿತ್ಥ ಕೋಚಿ ನಾಂ.**

–"ಬನ್ನಿ ! ಅವರನ್ನು ವಶಪಡಿಸಿಕೊಳ್ಳಿ ! ಅವರನ್ನು ಬಂಧಿಸಿ ! ರಾಗ ಮತ್ತು ದ್ವೇಷದಲ್ಲಿ ಅವರನ್ನು ಸಿಕ್ಕಿಸಿ. ಯಾರನ್ನೂ ಬಿಡಬೇಡಿ". ಈ ರೀತಿಯಾಗಿ ಅವನು ಗರ್ಜಿಸಿದ, ಗುಡುಗಿದ ಮತ್ತು ತನ್ನ ಸೈನ್ಯದೊಂದಿಗೆ ಸಭೆಯೊಳಗೆ ಇಳಿದು ಬಂದ. ಭಗವಾನ್ ಬುದ್ಧರು ಭಿಕ್ಖುಗಳನ್ನುದ್ದೇಶಿಸಿ ಈ ರೀತಿ ಹೇಳಿದರೆ–

**ಮಾರಸೇನಾ ಅಭಿಕ್ಕಂತಾ, ತೆ ವಿಜಾನಾಥ ಭಿಕ್ಖವೊ. (ಮಹಾಸಮಯ ಸುತ್ತ 2.7.342)**

–"ಓ ಭಿಕ್ಖುಗಳೇ, ಎಚ್ಚರದಿಂದಿರಿ, ಮಾರನ ಸೈನ್ಯ ಬಂದಿರುವುದನ್ನು ಅರ್ಥ ಮಾಡಿಕೊಳ್ಳಿ".

ಈ ಎಚ್ಚರಿಕೆಯನ್ನು ಕೇಳಿದ ಮೇಲೆ, ವಿಪಶ್ಯನ ಧ್ಯಾನ ಮಾಡುತ್ತಿದ್ದ ಭಿಕ್ಖುಗಳು ಸೂಕ್ಷ್ಮವಾಗಿ ಗಮನಿಸಿದರು. ಈ ರೀತಿಯಾಗಿ ಅವರು ಮಾರನ ಮಲಿನತೆಗಳ ಸೈನ್ಯವನ್ನು ಓಡಿಸಿದರು.

ದೈವೀ ಜೀವಿಗಳ ಇರುವಿಕೆಯ ಬಗ್ಗೆ ಕೆಲವು ಮಾತುಗಳು : ಈ 500 ಅರಹಂತರು ಈ ಅದೃಶ್ಯ ಜೀವಿಗಳನ್ನು ನೋಡಲು ದಿವ್ಯ ದೃಷ್ಟಿಯನ್ನು ಸಾಧಿಸಿದರು ಎಂಬುದನ್ನು ತಿಳಿದೆವು. ಧ್ಯಾನದಿಂದ ಪರಿಶುದ್ಧಗೊಂಡ ಮನಸ್ಸಿನಿಂದ ದಿವ್ಯದೃಷ್ಟಿಯನ್ನು ಪಡೆಯಬಹುದು ಎಂಬುದಕ್ಕೆ ಪುರಾವೆಯಿದೆ. ಆದರೆ ಇದನ್ನು ಅರ್ಹ ಆಚಾರ್ಯರು ಅರ್ಹ ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಎಲ್ಲಾ ಭಿಕ್ಖುಗಳೂ ಒಂದೇ ಸಂಖ್ಯೆಯ ದೇವತೆಗಳನ್ನು ಮತ್ತು ಯಕ್ಷರನ್ನು (ಕೆಳಹಂತದ ದೈವೀ ಸ್ತರಗಳ ಜೀವಿಗಳು) ನೋಡಲಿಲ್ಲ.

ಸಯಾಜಿ ಉ ಬಾ ಖಿನ್‌ರವರ ವಿಪಶ್ಯನ ಧ್ಯಾನ ಕೇಂದ್ರದಲ್ಲಿಯೂ ದಿವ್ಯದೃಷ್ಟಿಯ ಸಾಮರ್ಥ್ಯವನ್ನು ಬೆಳೆಸಿಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಾಣುವ ದೈವೀ ಜೀವಿಗಳ ಸಂಖ್ಯೆಯು ವ್ಯತ್ಯಾಸವಾಗುತ್ತದೆ. ಒಬ್ಬ ವಿದ್ಯಾರ್ಥಿಯು ಒಟ್ಟಿಗೆ ನೂರು ದೇವತೆಗಳನ್ನು, ಮತ್ತೊಬ್ಬ ವಿದ್ಯಾರ್ಥಿಯು ಒಂದು ಸಾವಿರ, ಮಗದೊಬ್ಬ ಇನ್ನೂ ಹೆಚ್ಚು ಸಂಖ್ಯೆಯ ದೇವತೆಗಳ ಸಮೂಹವನ್ನು ನೋಡಬಹುದು. ಆದರೆ ದೇವತೆಗಳ ಚಹರೆಯ ಗ್ರಹಿಕೆಯು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಒಂದೆ ತೆರನಾಗಿರುತ್ತದೆ; ಸಂಖ್ಯೆಯನ್ನು ನೋಡುವ ಸಾಮರ್ಥ್ಯ ಮಾತ್ರ ವ್ಯತ್ಯಾಸವಾಗಿರುತ್ತದೆ. ತೀಕ್ಷ್ಣ ದಿವ್ಯ ದೃಷ್ಟಿಯನ್ನು ಹೊಂದಿರುವ ಸಾಧಕರ ದೃಷ್ಟಿಯು ಬಹಳ ದೂರದವರೆಗೆ ತಲುಪುವುದರಿಂದ ಹೆಚ್ಚು ಸಂಖ್ಯೆಯ ದೈವೀ ಜೀವಿಗಳನ್ನು ಕಾಣುತ್ತಾರೆ. ವಿದ್ಯಾರ್ಥಿಗಳು ಕೇವಲ ಕಲ್ಪನೆ ಮಾಡಿಕೊಳ್ಳುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು, ಈ ಸಾಮರ್ಥ್ಯವಿರುವ ಇಬ್ಬರು ವಿದ್ಯಾರ್ಥಿಗಳ ಅನುಭವಗಳನ್ನು ಪ್ರತ್ಯೇಕವಾಗಿ ಪರೀಕ್ಷಿಸಿ ನೋಡಲಾಗುವುದು. ಅವರ ವಿವರಣೆಗಳು ಒಂದೇ ರೀತಿಯಾಗಿದ್ದರೆ ಮಾತ್ರ ಅವುಗಳನ್ನು ಸರಿಯಾಗಿವೆ ಎಂದು ಪರಿಗಣಿಸಲಾಗುವುದು.

ಮತ್ತೊಂದು ಗಮನಾರ್ಹವಾದುದೆಂದರೆ, ಉಪಸ್ಥಿತರಿದ್ದ ಬಹುತೇಕ ಎಲ್ಲಾ ದೇವತೆಗಳನ್ನು ಈ ಮುಂದಿನಂತೆ ಪ್ರಶಂಸಿಸುವುದನ್ನು ನೋಡಿದರೆ ಅಲ್ಲಿ ಅತಿಶಯೋಕ್ತಿ ಇಲ್ಲ ಎನಿಸುತ್ತದೆ.

**...ಮಹಾಬ್ಬಲಾ; ಇದ್ಧಿಮಂತೊ, ವಣ್ಣವಂತೊ ಯಸಸ್ಸಿನೊ (ಮಹಾಸಮಯ ಸುತ್ತ 2,7....336)**

–ಅವರು ಸರ್ವಶಕ್ತರು, ಉಜ್ವಲ ಪ್ರಭೆಯುಳ್ಳವರು, ಬೆಳಕನ್ನು ಸೂಸುವವರು, ಶಾಖವಿಲ್ಲದ ಬೆಳಕನ್ನು ನೀಡುವವರು ಮತ್ತು ಮಹಿಮಾನ್ವಿತರು.

ಈ ದೇವತೆಗಳು ಮತ್ತು ಯಕ್ಷರು ಶಕ್ತಿ ಮತ್ತು ತೇಜಸ್ಸನ್ನು ಹೊಂದಿರುವುದು ಸಹಜವಾದುದೇ. ಮಾನವರಿಗೆ ಹೋಲಿಸಿದರೆ, ಅವರು ಬಹಳ ಬಲಶಾಲಿಗಳು ಮತ್ತು ಉಜ್ವಲವಾಗಿ ಪ್ರಕಾಶಿಸುವವರು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅನಿರ್ಬಂಧಿತವಾಗಿ ಪ್ರವಹಿಸುವ ಆಕಾರವಿರುವುದರಿಂದ, ಮಾನವರಿಗೆ ಅಸಾಧ್ಯವಾದ ಕೆಲಸಗಳನ್ನು ಅವರು ಮಾಡಬಲ್ಲರು. ಹಿಂದಿನ ಜನ್ಮಗಳ ಅವರ ಕ್ರಿಯೆಗಳನ್ನು (ಕಮ್ಮಗಳನ್ನು) ಆಧರಿಸಿ, ಈ ಜೀವಿಗಳ ತೇಜಸ್ಸು ಮತ್ತು ಬೆಳಕನ್ನು ಸೂಸುವುದು ಸಹ ಭಿನ್ನವಾಗಿರುತ್ತದೆ. ಕೆಲವರು ವಿಪಶ್ಯನ ಧ್ಯಾನ ಸಾಧಕರು. ಇವರು ಬಹಳ ಪರಿಶುದ್ಧ ಮನಸ್ಸಿನವರಾಗಿದ್ದು ಶೋಭಾಯಮಾನವಾಗಿ ಪ್ರಕಾಶಿಸುತ್ತಾರೆ.

ಶೀಲಪಾಲನೆ ಮಾಡುತ್ತಾ, ಸಮಾಧಿ ಮತ್ತು ವಿಪಶ್ಯನವನ್ನು ಅಭ್ಯಾಸ ಮಾಡುತ್ತಾ ಧರ್ಮ ಮಾರ್ಗದಲ್ಲಿ ನಾವು ನಡೆದರೆ ಮಾತ್ರ ಈ ಅದೃಶ್ಯ ಜೀವಿಗಳು ನಮ್ಮನ್ನು ರಕ್ಷಿಸುತ್ತವೆ. ಇಂತಹ ಸಮ್ಮ ದೇವತೆಗಳು ನಮ್ಮ ವಿಪಶ್ಯನ ಸಾಧನೆಯಲ್ಲಿ ನಮ್ಮ ಜೊತೆಗಿದ್ದು ಸಂತೋಷದಿಂದ ನಮ್ಮನ್ನು ಪ್ರೋತ್ಸಾಹಿಸುತ್ತಾರೆ. ಈ ರೀತಿಯಾಗಿ, ಅನೇಕ ಅದೃಶ್ಯ ಧ್ಯಾನ ಸಾಧಕರ ಉಪಸ್ಥಿತಿಯು ನಮ್ಮ ಸುತ್ತಲಿನ ವಾತಾವರಣವನ್ನು ಶಾಂತಿಗೊಳಿಸಿ, ಪರಿಶುದ್ಧಗೊಳಿಸಿ ನಮ್ಮ ಏಕಾಗ್ರತೆಯನ್ನು ಬಲಗೊಳಿಸುತ್ತದೆ. ಈ ಕಾರಣದಿಂದ ಮನಸ್ಸಿನ ಮಲಿನತೆಗಳು ಬಹಳ ವೇಗವಾಗಿ ನಾಶವಾಗುತ್ತವೆ ಮತ್ತು ಮುಕ್ತಿಯ ಅತ್ಯುನ್ನತ ಗುರಿಯನ್ನು ತಲುಪುವುದು ತ್ವರಿತಗೊಳ್ಳುತ್ತದೆ. ನಮ್ಮ ನಿತ್ಯದ ಜೀವನದಲ್ಲಿ ಧರ್ಮವನ್ನು ಅನುಸರಿಸುವುದಕ್ಕೂ ಸಮ್ಮ ದೇವತೆಗಳು ನಮಗೆ ಸಹಾಯ ಮಾಡುತ್ತಾರೆ. ಆದರೆ ನಾವು ಧರ್ಮ ಮಾರ್ಗದಲ್ಲಿ ಸ್ಥಿರವಾಗಿ ಸ್ಥಾಪಿತಗೊಂಡರೆ ಮಾತ್ರ ಈ ಎಲ್ಲಾ ರಕ್ಷಣೆ ದೊರೆಯುತ್ತದೆ. ಮಾರ್ಗದಲ್ಲಿ ನಡೆಯುವ ಇಂತಹ ಸಮ್ಮ ದೇವತೆಗಳಿಗೆ ನಮ್ಮ ಗೌರವವನ್ನು, ಕೃತಜ್ಞತೆಯನ್ನು ಮತ್ತು ಮೈತ್ರಿಯನ್ನು ಒಬ್ಬ ಸದ್ಗುಣ ಸಂತ ವ್ಯಕ್ತಿಗೆ ಕೊಡುವ ರೀತಿಯಲ್ಲಿ ಕೊಡಬೇಕು. ಇದರಲ್ಲಿ ತಪ್ಪಿಲ್ಲ. ಆದರೆ ಇದಕ್ಕಿಂತ ಹೆಚ್ಚು ಬೇಕಿಲ್ಲ.

ಮಹಾಸಮಯ ಸುತ್ತದ ಕೊನೆಯಲ್ಲಿ, ದೇವತೆಗಳು ಮತ್ತು ಬ್ರಹ್ಮರ ಈ ಮಹಾಸಭೆಗೆ ಮಾರ ಮತ್ತವನ ದುಷ್ಟ ಸಹಚರರ ಅಹಿತಕರ ಆಗಮನವನ್ನು ನಾವು ನೋಡುತ್ತೇವೆ. ಮಾರನ ಏಕೈಕ ಉದ್ದೇಶವೆಂದರೆ, ಜೀವಿಗಳನ್ನು ಮನಸ್ಸು ಮತ್ತು ಶರೀರ ಕ್ಷೇತ್ರದಲ್ಲಿ, ರಾಗ–ದ್ವೇಷ ಮತ್ತು ಮೋಹದಲ್ಲಿ ಬಂಧಿಸಿಡುವುದು. ಯಾರೇ ಆಗಲಿ ಧ್ಯಾನ ಮಾಡಿ ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳುವುದು ಮಾರನಿಗೆ ಇಷ್ಟವಾಗುವುದಿಲ್ಲ. ಆದ್ದರಿಂದ ವ್ಯಕ್ತಿಯ ಮನಸ್ಸಿನಲ್ಲಿ ಮಲಿನತೆಗಳನ್ನು ಹುಟ್ಟು ಹಾಕಿ ಗೊಂದಲಗೊಳಿಸುವ ಅಥವಾ ಧ್ಯಾನವನ್ನು ನಿಲ್ಲಿಸುವ ಎಲ್ಲಾ ರೀತಿಯ ಕುತಂತ್ರಗಳನ್ನೂ ಅವನು ಮಾಡುತ್ತಾನೆ. ಜೀವಿಗಳು ಹುಟ್ಟು ಸಾವಿನ ಚಕ್ರದಲ್ಲಿ ಸುತ್ತುವುದನ್ನು ಮಾರನು ಬಯಸುತ್ತಾನೆ.

ವಿಪಶ್ಯನ ಧ್ಯಾನ ಸಾಧಕರು ಮಾರನ ಬಗ್ಗೆ ಅಂದರೆ ಮನಸ್ಸಿನಲ್ಲಿ ಮಲಿನತೆಗಳು ಉದಯವಾಗುವುದರ ಬಗೆಗೆ ಸದಾ ಎಚ್ಚರದಿಂದಿರಬೇಕು. ಮಾರನನ್ನು ಜಯಿಸಲು ಕ್ಷಣ ಪ್ರತಿ ಕ್ಷಣ ಕೇವಲ ಶರೀರದ ಸಂವೇದನೆಗಳನ್ನು ಗಮನಿಸಿ ವ್ಯಕ್ತಿಯು ಜಾಗೃತನಾದ ತಕ್ಷಣ ಮಾರ ಮತ್ತವನ ಮಲಿನತೆಗಳ ಸೈನ್ಯವು ಮಾಯವಾಗುತ್ತದೆ, ಮನೆಯ ಯಜಮಾನ ಎಚ್ಚರಗೊಂಡ ಕೂಡಲೇ ಕಳ್ಳ ಓಡಿಹೋಗುವಂತೆ. ತೀವ್ರ ಭಾವೋದ್ರೇಕವು ನಿಮ್ಮ ಮನಸ್ಸನ್ನು ಆಕ್ರಮಿಸಿ ಕೊಂಡಾಗ, ಒಂದು ಕ್ಷಣ ಈ ಸತ್ಯವನ್ನು ಅರಿಯಿರಿ, "ಓ, ನನ್ನ ಮನಸ್ಸಿನಲ್ಲಿ ಭಾವೋದ್ರೇಕ ಬಂದಿದೆ". ಅದಷ್ಟೇ. ಭಾವೋದ್ರೇಕವು ಬಂದಿರುವುದನ್ನು ಅರ್ಥ ಮಾಡಿಕೊಂಡು ಸಂವೇದನೆಗಳನ್ನು ಗಮನಿಸಲು ಪ್ರಾರಂಭಿಸಿದ ಕೂಡಲೇ ಅದು ಕಣ್ಣಿಗೆ ಬಿದ್ದ ಕಳ್ಳನ ತರಹ ಓಡಿಹೋಗುತ್ತದೆ. ' ಓಮಾರ ನಾನು ನಿನ್ನನ್ನು ನೋಡಿದೆ." ಕೋಪ, ಅಹಂ, ಹೊಟ್ಟೆಕಿಚ್ಚು ಮುಂತಾದವಕ್ಕೂ ಇದೇ ಅನ್ವಯಿಸುತ್ತದೆ. ಮಲಿನತೆಗಳ ಈ ಆಲೋಚನೆಗಳು ಬಂದ ಕೂಡಲೇ, ಈ ಆಲೋಚನೆಗಳ ಜೊತೆಗೇ ಬರುವ ಶರೀರದ ಸಂವೇದನೆಗಳನ್ನು ಗಮನಿಸಿ. ಮಲಿನತೆಗಳು ಬಲಹೀನವಾಗಿ ಹೊರಟು ಹೋಗುತ್ತವೆ.

ಆದರೆ ನಾವು ಇದನ್ನು ಮಾಡುತ್ತೇವೆಯೇ? ಹೀಗೆ ಮಾಡುವುದಕ್ಕೆ ಬದಲಾಗಿ, ಮಲಿನತೆಗಳು ಮನಸ್ಸಿನಲ್ಲಿ ಬಂದ ಕೂಡಲೇ ಆ ಮಲಿನ ಆಲೋಚನೆಗಳಲ್ಲೇ ಮುಳುಗಿ ನಾವು ಅವುಗಳನ್ನು ದ್ವಿಗುಣ ಮಾಡಿಕೊಳ್ಳಲು ಆರಂಭಿಸುತ್ತೇವೆ. ಅರಿವಿನ ಲವಲೇಶವೂ ಇರುವುದಿಲ್ಲ. ಅಶುದ್ಧ ಆಲೋಚನೆಗಳಲ್ಲಿ ಮುಳುಗಿ, ಅಶುದ್ಧತೆಯಿಂದ ಆಕ್ರಮಿಸಲ್ಪಟ್ಟು, ವ್ಯಕ್ತಿಯು ಅನಾರೋಗ್ಯಕರವಾದ ಕ್ರಿಯೆಗಳನ್ನು ಮಾಡುತ್ತಾನೆ. ಸ್ವಲ್ಪ ಸಮಯದ ನಂತರ ಅರಿವಿಗೆ ಬಂದು, ಮಾರನ ಬಲೆಯಲ್ಲಿ ಬಿದ್ದ ಮೂರ್ಖತನಕ್ಕಾಗಿ ಪರಿತಪಿಸುತ್ತಾನೆ. ಆದರೆ ಅದು ಹೇಗೆ ಸಹಾಯ ಮಾಡುತ್ತದೆ? ಮಾರನು ರಣಗರ್ಜನೆ ಮಾಡುತ್ತಾ ಬರುವಾಗ, ಮಾರನನ್ನು ಗೆಲ್ಲಲು ಕೇವಲ ನಮ್ಮ ಅರಿವೇ ಸಾಧನವಾಗುತ್ತದೆ. ನಂತರ ಪಶ್ಚಾತ್ತಾಪಪಡುವುದರಿಂದ ಉಪಯೋಗವಿಲ್ಲ. ಪ್ರತಿಕ್ಷಣವೂ ಜಾಗೃತರಾಗಿ ಎಚ್ಚರಿಕೆಯಿಂದಿರುವುದೇ ಉತ್ತಮ.

ಆದ್ದರಿಂದ ಬನ್ನಿ, ವಿಪಶ್ಯನ ಧ್ಯಾನದಿಂದ ಮಲಿನತೆಗಳನ್ನು ನಾಶಮಾಡಿ ಮಾರನ ಹಿಡಿತದಿಂದ ನಮ್ಮನ್ನು ನಾವೇ ಬಿಡುಗಡೆಗೊಳಿಸಿಕೊಳ್ಳೋಣ. ಕ್ಷಣ ಪ್ರತಿಕ್ಷಣ ಸಮತೆಯಿಂದ ಸಂವೇದನೆಗಳನ್ನು ಗಮನಿಸುವ ಅಭ್ಯಾಸದ ಮೂಲಕ ನಮ್ಮ ಕಲ್ಯಾಣವನ್ನು ಸಾಧಿಸೋಣ. ಇದರಲ್ಲಿಯೇ ಪ್ರತಿಯೊಬ್ಬರ ಕ್ಷೇಮವೂ ಅಡಗಿದೆ.

ಆಶೀರ್ವಾದಗಳೊಂದಿಗೆ,
ಸತ್ಯನಾರಾಯಣ ಗೋಯಂಕ.

**ಮ್ಯಾನ್ಮಾರ್ ಧರ್ಮಪುತ್ರ, ಆಧುನಿಕ ಕಾಲದ ಅಶೋಕ**

–ಪೂಜ್ಯ ಭಂತೆ ಅಶಿನ್ ನ್ಯಾನಿಸ್ಸರ

ಮ್ಯಾನ್ಮಾರ್‌ನ ಸಗಾಯಿಂಗ್‌ನ ಅತ್ಯಂತ ಪೂಜನೀಯರಾದ ಭಿಕ್ಖು ಸಿತಾಗು ಸಯಾದೊ (ಭಂತೆ ನ್ಯಾನಸ್ಸರ) ರವರು ಪ್ರಧಾನ ವಿಪಶ್ಯನ ಆಚಾರ್ಯರಾದ ದಿವಂಗತ ಎಸ್.ಎನ್. ಗೋಯಂಕಜಿಯವರ ಬಗೆಗೆ ಅಪಾರವಾದ ಗೌರವ ಮತ್ತು ಮೈತ್ರಿಯನ್ನು ಹೊಂದಿದ್ದಾರೆ. ಸಯಾದೊರವರ ಮೈತ್ರಿಯಿಂದ ಗೋಯಂಕಜಿಯವರ ಅಸ್ಥಿ ವಿಸರ್ಜನೆಯ ಅಂತಿಮ ಧಾರ್ಮಿಕ ಕ್ರಿಯೆಗೆ

ರಂಗೂನಿನಲ್ಲಿ, ಮ್ಯಾಂಡಲೆಯಲ್ಲಿ ಮತ್ತು ಇರ್ರಾವಾಡಿ ನದಿಯ ಉಗಮ ಸ್ಥಾನವಾದ ಮಿಟ್ಕಿನಾದಲ್ಲಿ ಸಾವಿರಾರು ಜನರು ಸೇರಿದ್ದರು. ಧಾರ್ಮಿಕ ವಿಧಿಯ ಮೆರವಣಿಗೆಯು ಮ್ಯಾಂಡಲೆಯ ಧಮ್ಮ ಮಂಡಲ ವಿಪಶ್ಯನ ಧ್ಯಾನ ಕೇಂದ್ರದಿಂದ ಪ್ರಾರಂಭವಾಗಿ ಇರ್ರಾವಾಡಿ ನದಿ ತೀರದ ಪನ್ಮಡಿ ಜೆಟ್ಟಿಯವರೆಗೆ ಸಾಗಿತು. ಧರ್ಮ ಗೀತೆಗಳನ್ನು ಮಧುರವಾಗಿ ಪಠನ ಮಾಡುತ್ತಿದ್ದ ಅನೇಕ ಭಿಕ್ಖುಗಳನ್ನು ಮತ್ತು ಭಿಕ್ಖುಣಿಯರನ್ನು ಮೆರವಣಿಗೆಯು ಒಳಗೊಂಡಿತ್ತು. ಇರ್ರಾವಾಡಿ ನದಿಯ ಮೇಲೆ ಐದು ದೋಣಿಗಳು ವೃತ್ತಾಕಾರದಲ್ಲಿ ಚಲಿಸಿದವು. ಅದರಲ್ಲಿದ್ದ ಜನರು ಗೋಯಂಕಜಿಯವರ ಗೌರವಾರ್ಥ ಒಂದು ಸಾವಿರ ದೀಪಗಳನ್ನು ತೇಲಿ ಬಿಟ್ಟರು. ಈ ಮೆರವಣಿಗೆಯು ಪ್ರಾರಂಭವಾಗುವ ಮೊದಲು ಸಂಘದಾನ ಸಮಾರಂಭದಲ್ಲಿ ಪೂಜ್ಯ ಭಂತೆ ನ್ಯಾನಿಸ್ಸರರವರು ನೆರೆದಿದ್ದ ಭಿಕ್ಖುಗಳನ್ನು ಮತ್ತು ಭಿಕ್ಖುಣಿಯರನ್ನು ಉದ್ದೇಶಿಸಿ ಈ ಮುಂದಿನ ಮಾತುಗಳನ್ನು ಹೇಳಿದರು:

**"ಅನಿಚ್ಚಾವತ ಸಂಖಾರಾ, ಉಪ್ಪಾದವಯಧಮ್ಮಿನೋ ;**
**ಉಪಜ್ಜಿತ್ವಾ ನಿರುಜ್ಝಂತಿ, ತೇಸಂ ವೂಪಸಮೋ ಸುಖೋ."**

ವಾಸ್ತವವಾಗಿ ಎಲ್ಲಾ ಸಂಖಾರಗಳೂ ಅಶಾಶ್ವತ. ಉದಯವಾಗುವ ಎಲ್ಲವೂ ಸಂದರ್ಭಗಳು, ವಸ್ತುಗಳು ಜನರು– ಅಶಾಶ್ವತತೆಯ ಸ್ವಭಾವವನ್ನು ಹೊಂದಿವೆ. ಅವುಗಳ ನಿಜವಾದ ಗುಣವು, ಅವುಗಳ ಅಂತರ್ಗತ ಸ್ವಭಾವವು ಉದಯವಾಗುವುದು ಮತ್ತು ವ್ಯಯವಾಗುವುದು. ವಿಪಶ್ಯನದ ಅಭ್ಯಾಸದಿಂದ ವ್ಯಕ್ತಿಯು ಉದಯವಾಗುವ ಮತ್ತು ವ್ಯಯವಾಗುವ ಈ ವಿದ್ಯಮಾನವನ್ನು ಉದಯವಾಗುವುದು ನಿಲ್ಲುವವರೆಗೆ ಗಮನಿಸುತ್ತಾನೆ.ಇದೇ ಅತ್ಯುತ್ತಮ ಶಾಂತಿ, ಇದೇ ನಿಬ್ಬಾನ (ಮುಕ್ತಿ, ಜ್ಞಾನೋದಯ).

ಬುದ್ಧರ ಪರಿನಿಬ್ಬಾನದ ಸಮಯದಲ್ಲಿ ತಾವತಿಂಸ ಲೋಕದಿಂದ ಇತರ ದೇವತೆಗಳ ಜೊತೆ ಬಂದ ಸಕ್ಕ(ಇಂದ್ರ) ಈ ಮೇಲಿನ ಶ್ಲೋಕವನ್ನು ಪಠಿಸಿದರು. ಮಹಾಬ್ರಹ್ಮರು ತಮ್ಮ ಬ್ರಹ್ಮರುಗಳ ಸಮೂಹದೊಂದಿಗೆ ಹೂವಿನ ಮಳೆಗರೆದು ಗೌರವಾರ್ಪಣೆ ಸಲ್ಲಿಸಿದರು. ಅಂತಿಮ ನಮನ ಸಲ್ಲಿಸಲು ಭಿಕ್ಖುಗಳ ದೊಡ್ಡ ಗುಂಪೇ ಸೇರಿತ್ತು. ಗೋಯಂಕಜಿಯವರಿಗೆ ಅಂತಿಮ ನಮನ ಸಲ್ಲಿಸಲು ನಾವು ಇಲ್ಲಿ ಸೇರಿರುವಂತೆಯೇ ಸೇರಿದ್ದರು. ಬುದ್ಧರ ಪರಿನಿಬ್ಬಾನದ ಸಮಯದಲ್ಲಿ, ಬುದ್ಧರ ಪ್ರಯೋಜನಕಾರಿ ಬೋಧನೆಗಳನ್ನು ರಕ್ಷಿಸುವ ಸಂಕಲ್ಪ ತೊಟ್ಟಿದ್ದ ಪೂಜ್ಯ ಮಹಾಕಸ್ಸಪರವರು ಹಾಜರಿರಲು ಸಾಧ್ಯವಾಗಲಿಲ್ಲ. ಚಿತೆಗೆ ಅಗ್ನಿ ಸ್ಪರ್ಶ ಮಾಡುವ ಜವಾಬ್ದಾರಿಯು ಪೂಜ್ಯ ಅನಿರುದ್ಧರವರದಾಗಿತ್ತು.

ಇದನ್ನನುಸರಿಸಿ, ಮಹಾಬ್ರಹ್ಮ ಸಹಂಪತಿ, ಸಕ್ಕ– ದೇವತೆಗಳ ರಾಜ ಮತ್ತು ಪೂಜ್ಯ ಆನಂದ ಒಂದೊಂದು ಧಮ್ಮ ಶ್ಲೋಕವನ್ನು ಪಠಿಸಿದರು. ಪೂಜ್ಯ ಅನಿರುದ್ಧರವರು ಎರಡು ಧರ್ಮ ಸಂದೇಶಗಳನ್ನು ಪಠಿಸಿದರು. ಈ ರೀತಿಯಾಗಿ ಅಲ್ಲಿ ಉಪಸ್ಥಿತರಿದ್ದವರೆಲ್ಲ ಬುದ್ಧರ ಭೌತಿಕ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಿದರು.

ಗೌರವಾನ್ವಿತ ಗೋಯಂಕಜಿಯವರು ಭಾರತದ ಮುಂಬಯಿ ನಗರದಲ್ಲಿ ಮರಣ ಹೊಂದಿದರು. ಅಲ್ಲಿಯೇ ಅವರ ಅಂತಿಮ ಸಂಸ್ಕಾರ ನೆರವೇರಿತು. ಅವರು ಮ್ಯಾಂಡಲೆಯಲ್ಲಿ ಜನಿಸಿದ್ದರು ಮತ್ತು ಮಾತೃಭೂಮಿ ಮ್ಯಾನ್ಮಾರ್‌ನ್ನು ಆಳವಾಗಿ ಪ್ರೀತಿಸಿದರು. ಕಟ್ಟಾ ಹಿಂದು ಕುಟುಂಬದಲ್ಲಿ ಜನಿಸಿದ್ದರೂ, ನಂತರ ವಿಪಶ್ಯನವನ್ನು ಸ್ವೀಕರಿಸಿ ಅದರ ಪ್ರಮುಖ ಪ್ರವರ್ತಕರಾದರು. ವಿಪಶ್ಯನದ ಬಗೆಗಿನ ಅವರ ಅಗಾಧವಾದ ನಂಬಿಕೆಯು, ವಿಪಶ್ಯನದ ಸಹಾಯದಿಂದ ಅವರು ಅವರ ದುಃಖದಿಂದ ಹೊರಬಂದದ್ದರಿಂದ ಉದ್ಭವಿಸಿದ್ದು, ಎರಡು ಅಂಶಗಳು ಅವರ ನಂಬಿಕೆಯನ್ನು ಸ್ಥಿರಗೊಳಿಸಿದವು.

ಮೊದಲನೆಯದು, ಸಯಾಜಿ ಉ ಬಾ ಖಿನ್‌ರವರು ಅವರನ್ನು ಅವರ ಪ್ರಾಪಂಚಿಕ ಬಂಧನಗಳಿಂದ ಬಿಡುಗಡೆಗೊಳಿಸಿದರು. ಜೊತೆಗೆ ಸಯಾಜಿಯವರ ಆಚಾರ್ಯರಾಗಿದ್ದ ಪೂಜ್ಯ ಸಯಾ ಥೇಜಿಯವರು ಮತ್ತವರ ಆಚಾರ್ಯರಾದ ಪೂಜ್ಯ ಲೇಡಿ ಸಯಾದೋರವರು ಗೃಹಸ್ಥರನ್ನು ವಿಪಶ್ಯನ ಆಚಾರ್ಯರನ್ನಾಗಿ ನೇಮಿಸುವ ಪರಿಪಾಠವನ್ನು ಆರಂಭಿಸಿದರು.

ಇನ್ನೊಂದು ಅಂಶವೆಂದರೆ, 2500 ವರ್ಷಗಳ ಕಾಲ ಧರ್ಮವನ್ನು ಪರಿಶುದ್ಧ ರೂಪದಲ್ಲಿ ಜತನದಿಂದ ಕಾಪಾಡಿಕೊಂಡು ಬಂದದ್ದಕ್ಕಾಗಿ ಮ್ಯಾನ್ಮಾರ್‌ನ ಭಿಕ್ಖು ಸಂಘಕ್ಕೆ ಗೋಯಂಕಾಜಿಯವರು ಬಹಳ ಕೃತಜ್ಞರಾಗಿದ್ದರು. ಭಾರತೀಯರಾದ ಗೋಯಂಕಾಜಿಯವರು ಗ್ರಹಿಸಿದ ರೀತಿಯಲ್ಲಿ ಈ ಕೃತಜ್ಞತಾಭಾವವನ್ನು ಗ್ರಹಿಸುವಲ್ಲಿ ಬರ್ಮಾದ ಭಿಕ್ಖು ಸಂಘವು ವಿಫಲವಾಯಿತು. ಈ ಕೃತಜ್ಞತಾಭಾವವೇ, ಭಾರತದಲ್ಲಿ ವಿಪಶ್ಯನ ಧ್ಯಾನ ಕೇಂದ್ರವನ್ನು ಸ್ಥಾಪಿಸಲು ಮತ್ತು ಜಗತ್ತಿನಾದ್ಯಂತ ವಿಪಶ್ಯನವನ್ನು ಹರಡಲು ಗೋಯಂಕಾಜಿಯವರಿಗೆ ಪ್ರೇರಣೆ ನೀಡಿದ್ದು.

ಅಶೋಕ ಚಕ್ರವರ್ತಿಯ ನಂತರ ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ಮೂಲೆಮೂಲೆಗೂ ವಿಪಶ್ಯನ ಧ್ಯಾನವನ್ನು ಹರಡಿದವರು ಗೋಯಂಕಾಜಿಯವರು ಮಾತ್ರ ಎಂದು ಅವರಿಗೆ ವೈಯಕ್ತಿಕವಾಗಿ ಹೇಳಿದ್ದೆ. ಇತರೆ ಅನೇಕ ಜನರಿಗೆ ವಿವಿಧ ಸಂದರ್ಭಗಳಲ್ಲಿ ಈ ವಿಷಯವನ್ನು ಹೇಳಿದ್ದೆ.

ವಾಸ್ತವವಾಗಿ, ಗೋಯಂಕಾಜಿಯವರು ಆಧುನಿಕ ಕಾಲದ ಅಶೋಕ ಎಂದು ನಾನು ಅವರಿಗೆ ಮೂರು ಬಾರಿ ಹೇಳಿದ್ದೆ. ಇದಕ್ಕೆ ಅವರು "ನನ್ನನ್ನು ಅಶೋಕ ಚಕ್ರವರ್ತಿಯ ಜೊತೆ ಹೋಲಿಸುವುದು ಸರಿಯಲ್ಲ. ಹೌದು, ನಿಸ್ಸಂದೇಹವಾಗಿ ನಾನು ಆ ಮಹಾನ್ ಸಂಪ್ರದಾಯದ ಹಾದಿಯಲ್ಲಿ ನನ್ನ ಜೀವನವನ್ನು ನಡೆಸಬಯಸುತ್ತೇನೆ" ಎಂದು ಎರಡು ಬಾರಿ ಇದೇ ಉತ್ತರವನ್ನು ಕೊಟ್ಟರು.

ಮೂರನೆಯ ಸಂದರ್ಭದಲ್ಲಿ ನಾವು ಮುಂಬಯಿಯ ಸಮುದ್ರ ತೀರವೊಂದರಲ್ಲಿ ನಡೆಯುತ್ತಿದ್ದೆವು. ಮತ್ತೊಮ್ಮೆ ನಾನು ಅವರನ್ನು ಅಶೋಕ ಚಕ್ರವರ್ತಿಯ ಜೊತೆ ಹೋಲಿಸಿದೆ. ಈ ಫೋಟೋದಲ್ಲಿರುವಂತೆ ಅವರು ಕಿರುನಗೆ ಸೂಸಿದರು. "ಭಾರತದಲ್ಲಿ ಬರ್ಮಾದ ಸಂಘಕ್ಕೆ ಇಂದು ಇಪ್ಪತ್ತೊಂದು ಪವಿತ್ರ ಸ್ಥಳಗಳಿವೆ. ಆದರೆ ಒಂದೂ ನಿಮ್ಮ ತರಹ ಧ್ಯಾನ ಕೇಂದ್ರವನ್ನು ಸ್ಥಾಪಿಸಲಿಲ್ಲ. ಹೌದು, ಪೂಜ್ಯ ಮಹಸ್ಸಿ ಸಯಾದೊ ಮತ್ತು ತಾಂಗ್ ಪುಲು ಸಯಾದೊ ಧ್ಯಾನ ಕೇಂದ್ರಗಳನ್ನು ಸ್ಥಾಪಿಸಿದರು. ಆದರೆ ಅವುಗಳನ್ನು ಗೋಯಂಕಾಜಿಯವರ ಕೇಂದ್ರಗಳಿಗೆ ಹೋಲಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು ನಿಮಗೆ ಹೇಳುತ್ತಿದ್ದೇನೆ ನೀವು ಆಧುನಿಕ ಕಾಲದ ಅಶೋಕ" ಎಂದು. ಅವರು ಕಿರುನಗೆ ಬೀರಿದರು.

ಭಾರತವು ಧರ್ಮದ ಮಾತೃಭೂಮಿಯಾಗಿತ್ತು. ಆದರೆ ಧರ್ಮವು ತನ್ನ ನಿಜವಾದ ರೂಪದಲ್ಲಿ ಬಹಳಮಟ್ಟಿಗೆ ನಾಶವಾಗಿತ್ತು. ಅದನ್ನು ಮರು ಸ್ಥಾಪಿಸುವುದು, ಅದನ್ನು ಜೀವಂತಗೊಳಿಸುವುದು ನಮ್ಮ ಜವಾಬ್ದಾರಿ ಎಂದು ಗೋಯಂಕಾಜಿ ಹೇಳಿದರು. "ನೀವು ಧರ್ಮ ಎಂದು ಹೇಳುವಾಗ ಯಾವ ಅರ್ಥದಲ್ಲಿ ಹೇಳುತ್ತೀರಿ" ಎಂದು ನಾನು ಉದ್ದೇಶಪೂರ್ವಕವಾಗಿಯೇ ಅವರನ್ನು ಕೇಳಿದೆ. "ಧರ್ಮವು ಒಂದು ಶಿಸ್ತು, ಒಂದು ಆಲೋಚನಾ ಕ್ರಮ, ಒಂದು ಮಾರ್ಗ, ಒಂದು ಧ್ಯಾನ ವಿಧಾನ. ಸತ್ಯವನ್ನು ನಾವು ಮನಗಾಣುವವರೆಗೆ, ನಿರಂತರವಾದ ಈ ಹುಟ್ಟು–ಸಾವಿನ ಚಕ್ರದಲ್ಲಿ ನಾವು ಸಿಲುಕಿಕೊಳ್ಳುತ್ತೇವೆ" ಎಂದು ಉತ್ತರಿಸಿದರು.

ಗೌರವಾನ್ವಿತ ಜನರೇ, ಗೋಯಂಕಾಜಿಯವರ ಮರಣವು ಅಶೋಕ ಚಕ್ರವರ್ತಿಯ ಮರಣವಾಗಿದೆ. ಅವರ ಮರಣದಿಂದ ನಾವು ಆಧುನಿಕ ಕಾಲದ ಅಶೋಕನನ್ನು ಕಳೆದುಕೊಂಡಿದ್ದೇವೆ. ಅವರ ಮರಣದಿಂದ ವಿಶ್ವವು ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡಿದೆ. ವಿಶ್ವವು ನೋವನ್ನು ಅನುಭವಿಸುತ್ತಿದೆ. ಬ್ರಿಟಿಷ್, ಅಮೆರಿಕ, ಅರಬ್ ಪ್ರತಿಯೊಂದೂ ನೋವನ್ನು ಅನುಭವಿಸುತ್ತಿವೆ. ಅಲ್ಲಾನ ಮಾತೊಂದೇ ಸತ್ಯ ಎಂದು ನಂಬುವ ಕಟ್ಟಾ ಮುಸ್ಲಿಂ ವ್ಯಕ್ತಿಯನ್ನೂ ಸಮಾಧಾನಪಡಿಸಿ ವಿಪಶ್ಯನ ಧ್ಯಾನ ಶಿಬಿರದಲ್ಲಿ ಭಾಗವಹಿಸುವಂತೆ ಮಾಡುವ ಶಕ್ತಿ ಗೋಯಂಕಾಜಿಯವರಲ್ಲಿತ್ತು. ಮುಸ್ಲಿಮರಿಗೆ ಮತ್ತು ಇಸ್ರೇಲಿನ ಯೆಹೂದಿಗಳಿಗೂ ಅವರು ಅವಕಾಶ ಮಾಡುತ್ತಿದ್ದರು. ಅದಕ್ಕಾಗಿಯೇ ನಾನು ಹೇಳುವುದು ಅವರ ಮರಣದಿಂದ ನಾವು ಅಶೋಕನನ್ನು, ಧರ್ಮದೂತನನ್ನು ಕಳೆದುಕೊಂಡಿದ್ದೇವೆ ಎಂದು. ಸತ್ಯವನ್ನು ಕಾಣಲು ವಿಶ್ವಕ್ಕೆ ಕಣ್ಣುಗಳನ್ನು ಕೊಟ್ಟ ವ್ಯಕ್ತಿಯು ಹೊರಟು ಹೋಗಿದ್ದಾರೆ. ಈಗ ನಾನು ಚಿತಾಭಸ್ಮದ ಮೆರವಣಿಗೆ ಆರಂಭಿಸಲು ಅನುಮತಿ ಕೋರುತ್ತೇನೆ. ಆರಂಭಿಸುವ ಮೊದಲು, ಬುದ್ಧರ ಪರಿನಿಬ್ಬಾನದ ಸಂದರ್ಭದಲ್ಲಿ ಸಕ್ಕನು ಪಠಿಸಿದ 'ಅನಿಚ್ಚಾವತ ಸಂಖಾರ... ಶ್ಲೋಕವನ್ನು ನಾವು ಅರ್ಥ ಮಾಡಿಕೊಳ್ಳೋಣ.

ಸಂಖಾರ ಎಂದರೆ ಕಮ್ಮದ (ಕ್ರಿಯೆಗಳ) ಚಿತ್ತದ(ಮನಸ್ಸಿನ) ಪರಿಸರದ ಮತ್ತು ನಾವು ಸೇವಿಸುವ ಆಹಾರದ ಉತ್ಪನ್ನ, ಬೇರೇನೂ ಅಲ್ಲ. ಆದ್ದರಿಂದ ಈ ಅಶಾಶ್ವತ ಅಂಶಗಳಿಂದ ಆಗಿರುವ ರಚನೆಯು ಅಶಾಶ್ವತ. ಈ ಪ್ರಾಂಗಣವನ್ನು ನಾವು ಧರ್ಮದ ಪ್ರಾಂಗಣ ಎಂದು ಕರೆಯಬಹುದು ಏಕೆಂದರೆ ಇಲ್ಲಿ ಧರ್ಮ ಪ್ರವಚನಗಳು ನಡೆಯುತ್ತವೆ. ಇಲ್ಲಿ ನಾವು ತಿಂಡಿ ತಿನಿಸುಗಳನ್ನು ಮಾರಾಟ ಮಾಡಿದರೆ, ಆಗ ಹೋಟೇಲ್ ಎಂದು ಕರೆಯುತ್ತೇವೆ. ರಾಜ ಮತ್ತು ರಾಣಿ ಇಲ್ಲಿ ವಾಸಿಸಿದರೆ ಆಗ ಇದನ್ನು ಅರಮನೆ ಎಂದು ಕರೆಯುತ್ತೇವೆ. ನಾವು ಇಲ್ಲಿ ವಸ್ತುಗಳನ್ನು ಮಾರಾಟ ಮಾಡಿದರೆ, ಆಗ ಇದನ್ನು ಸೂಪರ್ ಮಾರ್ಕೆಟ್ ಎಂದು ಕರೆಯುತ್ತೇವೆ. ಆದರೆ ವಾಸ್ತವವಾಗಿ ಇದು ಏನು? ಇಟ್ಟಿಗೆ, ಕಬ್ಬಿಣ, ಗಾರೆಯಿಂದ ಮಾಡಿದ ಒಂದು ಕಟ್ಟಡ. ಇದು ಒಂದು ಮನೆ, ಒಂದು ಅರಮನೆ; ಒಂದು ಪಂಜರ, ಒಂದು ಶೌಚಗೃಹ. ಎಲ್ಲರಿಗೂ ಇದೇ ಸತ್ಯ, ಅವರು ಚೀನಿಯರಾಗಲಿ, ಬ್ರಿಟೀಷರಾಗಲಿ, ಭಾರತೀಯರಾಗಲಿ ಅಥವಾ ಬರ್ಮೀಯರಾಗಲಿ. ಅವರು ಒಬ್ಬ ಬ್ರಹ್ಮ, ಒಬ್ಬ ದೇವ, ಒಂದು ಬೆಕ್ಕು, ಒಂದು ಕೋಳಿ ಅಥವಾ ಒಂದು ನಾಯಿ, ಏನೇ ಆಗಲಿ ಅದು ಏನೂ ವ್ಯತ್ಯಾಸ

**RNI. No. : KARKAN/2015/68727. Postal Regn. No.: RNP/KA/BGS/2253/2020-22**
**Published On 10th & Posted On 20th of Every Month. Posted At : Bengaluru PSO, B'luru 26. Price(Annual)Rs.30.**

ಮಾಡುವುದಿಲ್ಲ. ಪ್ರತಿಯೊಬ್ಬರೂ ಒಂದು ರೂಪ(ಶರೀರ), ಚಿತ್ತ (ಮನಸ್ಸು) ಮತ್ತು ಹೇತು(ಒಂದು ಕಾರಣ)ವನ್ನು ಹೊಂದಿದ್ದಾರೆ. ಈ ಮೂರರ ಒಟ್ಟುಗೂಡುವಿಕೆಯು ಸಂಖಾರವನ್ನು ಉತ್ಪತ್ತಿ ಮಾಡುತ್ತದೆ. ಮೇಲೆ ಹೇಳಿದಂತೆ, ಈ ಮೂರರ ಗುಣ ಮತ್ತು ಸ್ವಭಾವವು ಉದಯವಾಗುವುದು ಮತ್ತು ವ್ಯಯ ವಾಗುವುದು, ಒಟ್ಟುಗೂಡವುದು ಮತ್ತು ಛಿದ್ರವಾಗುವುದು. ಈ ವಿದ್ಯಮಾನವು ಕೊನೆಯಿಲ್ಲದಂತೆ ಅನಂತಕಾಲದವರೆಗೆ ಮುಂದುವರೆಯುತ್ತದೆ.

ವಿಪಶ್ಯನ ಎಂದರೆ ಏನು? ಅದೊಂದು ಧ್ಯಾನ ವಿಧಾನ. ನಾವು ಮನಸ್ಸನ್ನು ನಮ್ಮೊಳಗೆ ತಿರುಗಿಸಿ ಉದಯವಾಗುವ ಮತ್ತು ವ್ಯಯವಾಗುವ ಸತ್ಯವನ್ನು ಗಮನಿಸುತ್ತೇವೆ. ಈ ಸತ್ಯವು ಹೇಗಿದೆ ಎಂದರೆ, ಇದನ್ನು ನಾವು ನಮ್ಮ ಶರೀರ ರಚನೆಯಲ್ಲಿ ಗಮನಿಸಬಹುದು. ಏನೇ ಉದಯವಾದರೂ, ವ್ಯಯವಾಗುತ್ತದೆ; ಮತ್ತು ಯಾವುದು ವ್ಯಯವಾಗುತ್ತದೆಯೋ ಅದು ಪುನಃ ಉದಯವಾಗುತ್ತದೆ. 'ಯದ ನಿಚ್ಚಮ್ ತಮ್ ದುಕ್ಖಮ್– ಯಾವುದು ಅನಿಚ್ಚವಾಗಿದೆಯೋ (ಅಶಾಶ್ವತವಾಗಿದೆಯೋ) ಅದು ದುಕ್ಖ (ನೋವು). ಅಂದರೆ, ಎಲ್ಲಿ ಅಶಾಶ್ವತತೆ ಇದೆಯೋ ಅಲ್ಲಿ ದುಃಖವಿದೆ. ಮತ್ತು ದುಃಖ ಮತ್ತು ಅಶಾಶ್ವತತೆಯು ಅನತ್ತಾ (ಹುರುಳಿಲ್ಲದವುಗಳು). 'ನಾನು', 'ನನ್ನದು' ಎಂಬುದಿಲ್ಲ. ಆದ್ದರಿಂದ ಅನಿಚ್ಚ, ದುಕ್ಖ ಮತ್ತು ಅನತ್ತಾ ಬೇರೆ ಬೇರೆಯಲ್ಲ, ಒಂದೇ ಎಂದು ಹೇಳಬಹುದು. ಅನಿಚ್ಚ ಎಲ್ಲಿದೆ? ಉದಯವಾಗುವುದು ಮತ್ತು ವ್ಯಯವಾಗುವುದರಲ್ಲಿದೆ. ವಿಪಶ್ಯನದಲ್ಲಿ ನಾವು ಏನನ್ನು ಗಮನಿಸುತ್ತೇವೆ? ಪ್ರಕಟವಾಗುವ ಸತ್ಯವನ್ನು ಗಮನಿಸುತ್ತೇವೆ. ಯಾವುದು ಮೇಲ್ನೋಟದ ಸತ್ಯ? ನಾಮ, ರೂಪ ಮತ್ತು ಹೇತು. ಈ ಮೂರರ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸುವ ಪ್ರಯತ್ನದ ಉದ್ದೇಶವು, ನಮ್ಮೊಳಗೆ ಉದಯವಾಗಿ ವ್ಯಯವಾಗುವುದನ್ನು ನಾವು ಮನಗಾಣುವುದು, ಮತ್ತು ಇದರಿಂದ ಬರುವ ದುಃಖವನ್ನು ಅರ್ಥ ಮಾಡಿಕೊಳ್ಳುವುದು. ಇದು ಸ್ಪಷ್ಟವಾದಾಗ, ನಾವು ಎಷ್ಟೊಂದು ಅಸಹಾಯಕರು ಎಂಬುದರ ಜೊತೆಗೆ ಅನತ್ತವೂ ಸ್ಪಷ್ಟವಾಗುತ್ತದೆ. ಈ ಮೂರರ ಮೇಲೆ ನಾವು ಯಾವುದೇ ನಿಯಂತ್ರಣವನ್ನು ಹೊಂದಿಲ್ಲ. ಈ ರೀತಿಯಾಗಿ ನಾವು ನಮ್ಮ ಭೌತಿಕ ಶರೀರವಾದ ನಾಮ–ರೂಪಕ್ಕೆ ಅಂಟಿಕೊಳ್ಳುವುದು ಕ್ರಮೇಣವಾಗಿ ಕಡಿಮೆಯಾಗುತ್ತದೆ. ಇದು ನಮ್ಮೆಲ್ಲರೊಳಗಿರುವ ಸಾರ್ವತ್ರಿಕ ಸತ್ಯ.

ಈ ಸತ್ಯದ ಅನುಭವಜ್ಞಾನವನ್ನು ಬುದ್ಧರು ನಮಗೆ ಕರುಣಿಸಿದರು ಮತ್ತು ದೇವೇಂದ್ರನು (ಸಕ್ಕ) ಮೇಲಿನ ಶ್ಲೋಕದಿಂದ ಬುದ್ಧರನ್ನು ಗೌರವಿಸಿದನು. ಅದೇ ರೀತಿ ಪ್ರತಿಯೊಬ್ಬರೂ ತಮ್ಮ ಭಕ್ತಿಯ ಹೂವುಗಳನ್ನು ಸಮರ್ಪಿಸಿದರು. ನಮ್ಮ ಭಕ್ತಿಯ ಹೂವುಗಳನ್ನು ಸಮರ್ಪಿಸುವಾಗ ನಾವು ಹೇಳುವುದೇನೆಂದರೆ, ಸಂಸಾರ (ದುಃಖದ ಸ್ಥಿತಿ, ಹುಟ್ಟು–ಸಾವಿನ ಚಕ್ರ)ಮತ್ತು ನಿಬ್ಬಾಣದ (ಅಂತಿಮ ಮುಕ್ತಿಯ ಸ್ಥಿತಿಯ) ಮಧ್ಯದ ಅಂತರ ಗಣನೀಯವಾಗಿಲ್ಲ. ನಿಬ್ಬಾಣವು ತಲುಪಲಾಗದಷ್ಟು ದೂರವಿಲ್ಲ. ಇದನ್ನು ಒಂದು ಉದಾಹರಣೆಯ ಮೂಲಕ ಅರ್ಥ ಮಾಡಿಕೊಳ್ಳೋಣ.

ಉದಾಹರಣೆಗೆ ಇರ್ರಾವಾಡಿ ನದಿಯ ನೀರು, ನದಿಯ ಒಂದು ದಡವನ್ನು ಮತ್ತೊಂದರಿಂದ ಪ್ರತ್ಯೇಕಿಸುತ್ತದೆ. ನೀರಿನ ಮಟ್ಟ ಹೆಚ್ಚಿದ್ದಾಗ, ಎರಡೂ ದಡಗಳ ಮಧ್ಯದ ಅಂತರ ಹೆಚ್ಚಿರುತ್ತದೆ. ಆದರೆ ನೀರಿನ ಮಟ್ಟ ಕಡಿಮೆಯಾದಂತೆ, ಅಂತರ ಕಡಿಮೆಯಾಗುತ್ತದೆ. ಅಂತಿಮವಾಗಿ, ನದೀ ಪಾತ್ರದಲ್ಲಿ ನೀರೇ ಇಲ್ಲದಿದ್ದಾಗ ಎರಡೂ ದಡಗಳು ಒಟ್ಟಿಗೆ ಸೇರುತ್ತವೆ. ಅಂದರೆ ಎರಡೂ ದಡಗಳ ಮಧ್ಯೆ ಅಂತರವಿಲ್ಲ, ಅಲ್ಲಿ ಏನೂ ಅಡೆತಡೆಯಿಲ್ಲ. ಒಂದು ದಡದಿಂದ ಮತ್ತೊಂದು ದಡಕ್ಕೆ ಪ್ರಯಾಣವು ಯಾವುದೇ ಅಡೆತಡೆಯಿಲ್ಲದೆ ಸುಗಮವಾಗುತ್ತದೆ.

ಇದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ನಮ್ಮನ್ನು ನಾವು ಮಲಿನತೆಗಳ ನೀರಿನಿಂದ ತುಂಬುವುದನ್ನು ತಪ್ಪಿಸಬೇಕು. ಏಕೆಂದರೆ ನಮ್ಮ ನೀರಿನ ಶರೀರವು ಮಲಿನತೆಗಳಿಂದ ತುಂಬಿದೆ, ನಿಬ್ಬಾಣದ ದಡವನ್ನು ಕಾಣಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ವಾಸ್ತವವಾಗಿ,ನಿಬ್ಬಾಣವು ಭೌತಿಕ ರೂಪದ (ಸಂಸಾರದ) ಹಿಂದೆಯೇ ಒಂದೇ ಸಾಲಿನಲ್ಲಿ ನಡೆಯುತ್ತಿರುತ್ತದೆ. ನಮ್ಮ ಮನಸ್ಸಿನ ಮಲಿನತೆಗಳ ಕಾರಣದಿಂದ ನಾವು ನದಿಯ ಎರಡು ದಡಗಳನ್ನು ಅರಿಯುತ್ತೇವೆ. ವಿಪಶ್ಯನವು ಪನ್ಯಾದ ನೀರಿನ ದೊಡ್ಡ ಹೂಜಿಯ ತರಹ. ಅದು ಮಲಿನತೆಗಳನ್ನು ಹೊರತೆಗೆಯುತ್ತದೆ. ಆದರೆ ಅದು ನೀವು ವಿಪಶ್ಯನದ ಧ್ಯಾನ ಕೇಂದ್ರಕ್ಕೆ ಹೋಗಿದ್ದೀರಾ ಮತ್ತು ನಿಮ್ಮ ಹತ್ತು ದಿನದ ಶಿಬಿರದಲ್ಲಿ ಎಷ್ಟು ನೀರನ್ನು ಹೊರಹಾಕಿದ್ದೀರಿ ಎಂಬುದನ್ನು ಅವಲಂಬಿಸಿರುತ್ತದೆ. ನೀರಿನ ಮಟ್ಟವು (ಪುನಃ) ಹೆಚ್ಚಾಗದಂತೆ ನಾವು ತಡೆದರೆ, ನಿಧಾನವಾಗಿ ಆದರೆ ಖಂಡಿತವಾಗಿ ದಡಗಳು ಹತ್ತಿರವಾಗುತ್ತವೆ. ಎಲ್ಲಾ ನೀರನ್ನು ಖಾಲಿ ಮಾಡಿದಾಗ, ಎರಡೂ ದಡಗಳು ಒಂದಾಗುತ್ತವೆ. ಸಂಸಾರ ಮತ್ತು ನಿಬ್ಬಾಣ ಒಂದೇ ಆಗುತ್ತವೆ.

ಇರುವ (ಸೀಮಿತ) ಸಮಯದಲ್ಲಿ ಇಷ್ಟನ್ನು ಮಾತ್ರ ಹೇಳಲು ಸಾಧ್ಯ. ಇಂದು ಇರ್ರಾವಾಡಿ ನದಿಯಲ್ಲಿ ಗೋಯಂಕಾಜಿಯವರ ಅಸ್ಥಿ ವಿಸರ್ಜನೆ ಮಾಡುವಾಗ, ನಾವು ಅದೇ ಶ್ಲೋಕಗಳನ್ನು ಪಠನ ಮಾಡಿ ನಮ್ಮ ಅಂತಿಮ ನಮನವನ್ನು ಸಲ್ಲಿಸೋಣ. ಬೇರೆ ಯಾವುದೇ ಶ್ಲೋಕ, ಯಾವುದೇ ಪ್ರಶಂಸಾಗೀತೆ ಬೇಡ. ನಮ್ಮೊಳಗಿನ ಸಂವೇದನೆಗಳನ್ನು ಗಮನಿಸುತ್ತಾ 'ಅನಿಚ್ಚ ವತ ಸಂಖಾರ' ಶ್ಲೋಕವನ್ನು ಪಠಿಸೋಣ.

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು** : 2021 : ಜೂನ್ 16–27, 30–11 ಜುಲೈ, 14–25, 28–8 ಆಗಸ್ಟ್ 11–22, 26–6 ಸೆಪ್ಟೆಂಬರ್ 11–19, 22–3 ಅಕ್ಟೋಬರ್, 7–18, 20–31. ನವೆಂಬರ್ 3–14, 17–28, ಡಿಸೆಂಬರ್ 1–12, 15–26.

**2 ದಿನದ ಶಿಬಿರ : ಜೂನ್ 11–13. ಸತಿಪಟ್ಠಾನ ಶಿಬಿರ : ಜೂನ್ 1–9, ಸೆಪ್ಟಂಬರ್ 11–19. ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ನಗರ ಸಾರಿಗೆ ಬಸ್ ಸಂಖ್ಯೆ : 256, 258, 258 ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್** : info@paphulla.dhamma.org;website : www. vridhamma.org.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ, ______________________